೪) ನಗರ ಪ್ರದೇಶಗಳಲ್ಲಿ ಖಾಸಗೀಯವರಿಗೆ ನ್ಯಾಯಬೆಲೆ ಅಂಗಡಿಯನ್ನು ಮಂಜೂರು ಮಾಡಬಾರದು. ಈ ಆಜ್ಞೆ ದಿನಾಂಕ ೧೫-೮-೧೯೮೬ರಿಂದ ಜಾರಿಯಲ್ಲಿದೆ.

ಅ) ನೀಡಲಾಗಿದೆ,

ಇ) ಬಂದಿದೆ.

ನ್ಯಾಯ ಬೆಲೆ ಅಂಗಡಿಗೆ ಆಹಾರ ಧಾನ್ಯದ ಹಂಚಿಕೆಯನ್ನು ನಿಲ್ಲಿಸಲಾಗಿತ್ತು.

ಈ) ಇಲ್ಲ. ಜಿಲ್ಲಾ ಪರಿಷತ್ತಿಗೆ ಸೂಕ್ತ ನಿರ್ದೇಶನ ನೀಡಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ರೇಷ್ಮೆ ಇಲಾಖಾ ಸಚಿವರು). — ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಮತ್ತು ಉತ್ತರಗಳ ಮೂರವತ್ತನೆಯ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು. — ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಮತ್ತು ಉತ್ತರಗಳ ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

ರಾಜ್ಯದಲ್ಲಿ ನಡೆದಿರುವ ದರೋಡೆಗಳ ಬಗ್ಗೆ

೧೫೩೮. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ). — ಮಾನ್ಯ ಪಂಚಾಯತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ ನಡೆದಿರುವ ಮನೆ ಮತ್ತು ರಸ್ತೆ ದರೋಡೆಗಳ ಸಂಖ್ಯೆ ಎಷ್ಟು ?

ಆ) ಇದರಲ್ಲಿ ಎಷ್ಟು ಪ್ರಕರಣಗಳು ಪತ್ತೆಯಾಗಿವೆ ಮತ್ತು ಎಷ್ಟು ಮಂದಿ ದಸ್ತಗಿರಿಯಾಗಿದ್ದಾರೆ ?

ಇ) ಪತ್ತೆಯಾದ ಪ್ರಕರಣಗಳಲ್ಲಿ ಸರ್ಕಾರವು ವಶಪಡಿಸಿಕೊಂಡಿರುವ ವಸ್ತುಗಳ ಮೌಲ್ಯವೆಷ್ಟು ಮತ್ತು ದರೋಡೆಗಾರರುಗಳ ಮೇಲೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಪಂಚಾಯತ್ ಮಂತ್ರಿಗಳು). —

ಅ) ವಿವರಗಳು ಕೆಳಕಂಡಂತಿವೆ

ವರ್ಷ	ದರೋಡೆಗಳು	
	ಮನೆ	ರಸ್ತೆ
೧೯೮೫	೯೪	೩೫
೧೯೮೬	೧೨೫	೪೭
೧೯೮೭	೧೦೭	೩೭

ಆ)

ವರ್ಷ	ಪತ್ತೆಯಾದವು		ದಸ್ತಗಿರಿಯಾದವರು	
	ಮನೆ	ರಸ್ತೆ	ಮನೆ	ರಸ್ತೆ
೧೯೮೫	೪೯	೨೪	೨೫೭	೩೦೬
೧೯೮೬	೬೬	೨೧	೨೧೮	೧೪೬
೧೯೮೭	೬೪	೧೯	೨೪೬	೯೦

ಇ)

ವರ್ಷ	ಕಳುವಾದ ವಸ್ತುಗಳ ಮೌಲ್ಯ ರೂ.	ವಶಪಡಿಸಿಕೊಂಡ ವಸ್ತುಗಳ ಮೌಲ್ಯ ರೂ.
೧೯೮೫	೧೯,೦೯,೦೯೧–೨೦	೮,೭೬,೭೫೮–೨೦
೧೯೮೬	೨೮,೧೧,೨೫೯–೮೦	೧೩,೦೪,೯೭೧–೦೦
೧೯೮೭	೧೭,೨೬,೧೫೬–೦೦	೩,೪೮,೬೮೯–೦೦

ದಿನಾಂಕ ೧–೧–೮೫ರಿಂದ ೧೯೮೮ರ ಮೇ ೧೫ರವರೆಗೆ ಒಟ್ಟು ೧೫೦೭ ಜನ ಅಪರಾಧಿಗಳನ್ನು ಬಂಧಿಸಲಾಗಿದೆ. ಒಟ್ಟು ೧೫೪ ದರೋಡೆ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿವೆ.

ಒಟ್ಟು ೧೧ ದರೋಡೆ ಪ್ರಕರಣಗಳಲ್ಲಿ ಅಪರಾಧಿಗಳಿಗೆ ನ್ಯಾಯಾಲಯವು ಶಿಕ್ಷೆ ವಿಧಿಸಿದೆ.

ಮುಂಬೈ ಬಸ್ ಸಾರಿಗೆ ಬಗ್ಗೆ

೧೫೩೧. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜವಂಖಿಂಡಿ—ಮುಂಬೈ ನಗರಗಳ ಮಧ್ಯೆ ರಾತ್ರಿ ಸಂಚಾರದ ಬಸ್ ಓಡಿಸುವಂತೆ ಜವಂಖಿಂಡಿಯ ನಾಗರೀಕರಿಂದ ಮನವಿ ಬಂದಿರುವುದು ನಿಜವೇ ;

ಆ) ಸರ್ಕಾರವು ಈ ಕೋರಿಕೆಯನ್ನು ಮನ್ನಿಸಿ ಬಸ್ಸ್ ಓಡಿಸುವ ವ್ಯವಸ್ಥೆ ಮಾಡುವುದೇ ?

ಇ) ಹಾಗಿಲ್ಲದಿದ ಲ್ಲಿ ಸರ್ಕಾರಕ್ಕೆ ಇರುವ ತೊಂದರೆಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಯವರು).—

ಅ) ಹೌದು.

ಆ) ಮತ್ತು ಇ) ಈ ಮಾರ್ಗವು ಈಗಿನ ಉಭಯ ರಾಜ್ಯಗಳ ಒಪ್ಪಂದದಲ್ಲಿ ಸೇರಿರುವುದಿಲ್ಲ. ಆದ್ದರಿಂದ ಈ ಮಾರ್ಗದ ಮೇಲೆ ಬಸ್ಸನ್ನು ಓಡಿಸಲು ಸಾಧ್ಯವಾಗಿರುವುದಿಲ್ಲ. ಈ ಮಾರ್ಗವನ್ನು ಮಹಾರಾಷ್ಟ್ರ ಸರ್ಕಾರದೊಡನೆ ಚರ್ಚಿಸಿ ಮುಂದಿನ ಉಭಯ ರಾಜ್ಯಗಳ ಒಪ್ಪಂದದ ಪಟ್ಟಿಯಲ್ಲಿ ಸೇರಿಸಲು ಉದ್ದೇಶಿಸಲಾಗಿದೆ.

ಸಚಿವರುಗಳ ವಿದೇಶ ಪ್ರವಾಸದ ಬಗ್ಗೆ

೧೫೩೪. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಮುಂಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭–೮೮ರಲ್ಲಿ ರಾಜ್ಯ ಸಚಿವ ಸಂಪುಟದ ಎಷ್ಟು ಜನ ಸಚಿವರು ವಿದೇಶ ಪ್ರವಾಸಕ್ಕೆ ಹೋಗಿದ್ದರು (ಸಚಿವರ ಹೆಸರುಗಳನ್ನು ಒದಗಿಸುವುದು)

ಆ) ಇವರ ವಿದೇಶ ಪ್ರವಾಸಕ್ಕಾಗಿ ರಾಜ್ಯ ಸರ್ಕಾರ ಖರ್ಚು ಮಾಡಿದ ಹಣವೆಷ್ಟು ?

ಇ) ಇವರ ವಿದೇಶ ಪ್ರವಾಸದ ಉದ್ದೇಶವೇನಿತ್ತು ?